**M.V.C.No. 924/2025**
**PW1**

ದಿನಾಂಕ 10.06.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃಅರ್ಜಿದಾರರ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ

ಈ ಪ್ರಕರಣದಲ್ಲಿ ನಾನು 2ನೇ ಅರ್ಜಿದಾರನಾಗಿದ್ದು, ನನ್ನ ಮುಖ್ಯ ವಿಚಾರಣೆ ಬದಲಿಗೆ ಪ್ರಮಾಣ ಪತ್ರವನ್ನು ಸಲ್ಲಿಸಿದ್ದೇನೆ. ಅದರಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿರುತ್ತವೆ ಮತ್ತು ಅದರಲ್ಲಿ ನನ್ನ ಸಹಿ ಇದೆ.

ಅಪಘಾತದ ಬಗ್ಗೆ ನಾನು ಪೊಲೀಸರಿಗೆ ನೀಡಿದ ದೂರಿನ ನೈಜ ಪ್ರತಿಯನ್ನು ನಿಪಿ–1 ಎಂದು, ಆ ಬಗ್ಗೆ ಪುತ್ತೂರು ಸಂಚಾರಿ ಪೊಲೀಸರು ದಾಖಲಿಸಿದ ಪ್ರ.ವ. ವರದಿಯ ನೈಜ ಪ್ರತಿಯನ್ನು ನಿಪಿ–2 ಎಂದು, ಸ್ಥಳ ಪಂಚನಾಮೆಯ ನೈಜ ಪ್ರತಿಯನ್ನು ನಿಪಿ–3 ಎಂದು, ಘಟನಾ ಸ್ಥಳದ ಕರಡು ನಕ್ಷೆಯ ನೈಜ ಪ್ರತಿಯನ್ನು ನಿಪಿ–4 ಎಂದು, ಅಪಘಾತದ ಬಗ್ಗೆ ಪುತ್ತೂರು ಸಂಚಾರಿ ಪೊಲೀಸರು ನೀಡಿದ ವರದಿಯ ನೈಜ ಪ್ರತಿಯನ್ನು ನಿಪಿ–5 ಎಂದು, ಎಂ.ವಿ.ಎ ವರದಿಯ ನೈಜ ಪ್ರತಿಯನ್ನು ನಿಪಿ–6 ಎಂದು,ಶವಪಂಚನಾಮೆಯ ನೈಜ ಪ್ರತಿಯನ್ನು ನಿಪಿ–7 ಎಂದು, ಮರಣೋತ್ತರ ಪರೀಕ್ಷಾ ವರದಿಯ ನೈಜ ಪ್ರತಿಯನ್ನು ನಿಪಿ–8 ಎಂದು, ಪುತ್ತೂರು ಸಂಚಾರಿ ಪೊಲೀಸರು ಸಲ್ಲಿಸಿದ ಅಂತಿಮ ವರದಿಯ ನೈಜ ಪ್ರತಿಯನ್ನು ನಿಪಿ–9 ಎಂದು ಗುರುತಿಸಲಾಯಿತು. ನಾನು ನನ್ನ ಹಾಗೂ 1 ಮತ್ತು 3ನೇ ಅರ್ಜಿದಾರರ ಆಧಾರ್ ಕಾರ್ಡುಗಳನ್ನು, ಪಡಿತರ ಚೀಟಿಯನ್ನು ಹಾಗೂ ನನ್ನ ತಂದೆಯ ಆಧಾರ್ ಕಾರ್ಡನ್ನು ಅವುಗಳ ನೋಟರೀಕೃತ ಪ್ರತಿಗಳೊಂದಿಗೆ ಹಾಜರು ಪಡಿಸಿದ್ದು, ಅವುಗಳನ್ನು ಮೂಲ ದಾಖಲೆಗಳೊಂದಿಗೆ ಹೋಲಿಸಿ ನೋಡಿ ಆ ನೋಟರೀಕೃತ ಪ್ರತಿಗಳನ್ನು ಕ್ರಮವಾಗಿ ನಿಪಿ–10 ರಿಂದ 14 ಎಂದು ಗುರುತಿಸಿ ಮೂಲ ದಾಖಲಾತಿಗಳನ್ನು ಸಾಕ್ಷಿಗೆ ಹಿಂತಿರುಗಿಸಲಾಯಿತು.

ಆದ್ದರಿಂದ ಅರ್ಜಿಯಲ್ಲಿ ಕೇಳಿದಂತೆ ಆದೇಶಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಯು.ಎಸ್.ಎನ್ ವಕೀಲರಿಂದಃ

(ಈ ಹಂತದಲ್ಲಿ ಸಾಕ್ಷಿಯ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಸಮಯಾವಕಾಶ ಕೋರಿದ್ದು, ಪ್ರಸ್ತುತ ಪ್ರಕರಣದಲ್ಲಿ ಎದುರುದಾರ ತನ್ನ ಆಕ್ಷೇಪಣೆಯನುನ ಸಲ್ಲಿಸದ ಕಾರಣ ಹಾಗೂ ಈ ದಿನ ಪಾಟೀ ಸವಾಲನ್ನು ಮುಂದೂಡಲು ಸಕಾರಣಗಳು ಇಲ್ಲದ ಕಾರಣ ವಕೀಲರ ಕೋರಿಕೆಯನ್ನು ತಿರಸ್ಕರಿಸಿ ಎದುರುದಾರರ ಪರ ಸಾಕ್ಷಿಯ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಎಂ.ಎ.ಸಿ.ಟಿ, ಸುಳ್ಯ